



ಅರುಣ ಪಿ. ಭಟ್ಟ


## ವಾರಭವಿಷ್ಯ: 11.11.2021ರಿಂದ 17.11.2021ರವರೆಗೆ




ಉದ್ಯೋಗಿಗಳಿಗೆ ವಾರದ ಶುರುವಿನಲ್ಲಿ ಯಶಸ್ಸು ದೊರೆಯುತ್ತದೆ. ಸಾರ್ವಜನಿಕ ಜೀವನದಲ್ಲಿ ಕೆಲ ಸವಾಲುಗಳನ್ನು ಸ್ವೀಕರಿಸಲಿದ್ದೀರಿ. ಸುಂದರವಾದ ತಾಣಗಳಿಗೆ ಪ್ರಯಾಣ ಮಾಡುವ ಸಾಧ್ಯತೆ ಇದೆ. ವಾರದ ಮಧ್ಯ ಭಾಗದಲ್ಲಿ ಉದ್ಯೋಗಸ್ಥರಿಗೆ ಮೆಚ್ಚುಗೆ ಮಾತುಗಳನ್ನು ಕೇಳುವ ಅವಕಾಶಗಳಿವೆ. ಹೊಸ ಕೆಲಸಗಳನ್ನು ಮಾಡಲು ಮನಸ್ಸು ಮಾಡುತ್ತೀರಿ. ಶುಭದಿನ 14. ನವದುರ್ಗಾ ಆರಾಧನೆ ಮಾಡಿರಿ.




ಸಾರ್ವಜನಿಕ ಸಂಪರ್ಕದ ಮೂಲಕ ಅನುಕೂಲ ಆಗಲಿದೆ. ಮೇಲಧಿಕಾರಿಗಳ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಕುಟುಂಬದಲ್ಲಿ ಸಂತಸದ ವಾತಾವರಣ ಇರುತ್ತದೆ. ಕಾನೂನು ವಿಚಾರಗಳಲ್ಲಿ ವಿರೋಧಿಗಳ ವಿರುದ್ಧ ಮೇಲುಗೈ ಸಾಧಿಸುತ್ತೀರಿ. ಆದರೆ ವಾರದ ಶುರುವಿನಲ್ಲಿ ಆರೋಗ್ಯ ಸ್ಥಿತಿ ಅಷ್ಟೇನೂ ಉತ್ತಮವಾಗಿರುವುದಿಲ್ಲ. ಆರೋಗ್ಯ ಸಮಸ್ಯೆಗೆ ಚಿಕಿತ್ಸೆಯನ್ನು ಪಡೆದುಕೊಳ್ಳಿ. ಶುಭದಿನ 15. ಹನುಮಾನ್ ಚಾಲಿಸ್ ಪಠಿಸಿರಿ.





ವಾರದ ಶುರುವಿನಲ್ಲಿ ವೈವಾಹಿಕ ಜೀವನ ಸಂತೋಷವಾಗಿರುತ್ತದೆ. ಈವರೆಗಿನ ಭಿನ್ನಾಭಿಪ್ರಾಯ ಮತ್ತು ಮನಸ್ತಾಪಗಳು ನಿವಾರಣೆ ಆಗುತ್ತವೆ. ಒಳ್ಳೆ ಆಹಾರ, ಫ್ಯಾಷನ್, ಬಟ್ಟೆಗಳು ಮತ್ತು ಮನರಂಜನೆ ವಿಚಾರದಲ್ಲಿ ಸಂಗಾತಿಯ ಆಯ್ಕೆ ತಕ್ಕಂತೆ ನಡೆದುಕೊಳ್ಳುತ್ತೀರಿ. ಆರೋಗ್ಯದ ಸಮಸ್ಯೆಗಳು ಈ ವರೆಗೆ ಇದ್ದಲ್ಲಿ ನಿಧಾನವಾಗಿ ಚೇತರಿಕೆ ಕಾಣಿಸಿಕೊಳ್ಳುತ್ತದೆ. ಶುಭದಿನ 13. ಸೌಂದರ್ಯ ಲಹರಿ ಪಠಿಸಿರಿ.





ನಿಮ್ಮ ನಡವಳಿಕೆ ವೃತ್ತಿಪರ ಬೆಳವಣಿಗೆಯನ್ನು ತಾಯಿ ಕಡೆಯ ಸಂಬಂಧಿಕರು ಹೊಗಳಲಿದ್ದಾರೆ. ಆಹಾರ ಹಾಗೂ ಪ್ರೀತಿ ಪಾತ್ರರಿಗೆ ಔತಣ ನೀಡುವ ಸಂಗತಿಗೆ ಪ್ರಾಶಸ್ತ್ಯ ನೀಡಲಿದ್ದೀರಿ. ದೊಡ್ಡ ಮೊತ್ತದ ಹಣದ ಸಂಗ್ರಹ ಮಾಡಲಿದ್ದೀರಿ. ಹಳಸಲು ಆಹಾರ ಪದಾರ್ಥಗಳ ಸೇವನೆ ಮಾಡಬೇಡಿ. ವಾರದ ಮಧ್ಯ ಭಾಗದಲ್ಲಿ ವೈವಾಹಿಕ ಜೀವನ ಸುಖಕರವಾಗಿರುತ್ತದೆ. ಶುಭದಿನ 12. ಲಿಂಗಾಷ್ಟಕ ಪಠಿಸಿರಿ.




ವಿವಿಧ ಕ್ಷೇತ್ರಗಳಲ್ಲಿ ಇರುವವರಿಗೆ ವರ್ಚಸ್ಸು ಹೆಚ್ಚಲಿದೆ. ಬಡ್ತಿ ನಿರೀಕ್ಷೆ ಮಾಡುತ್ತಿರುವವರು ಶುಭ ಸುದ್ದಿಯನ್ನು ಕೇಳಲಿದ್ದೀರಿ. ಉದ್ಯೋಗಕ್ಕೆ ಪ್ರಯತ್ನ ಮಾಡುತ್ತಿರುವವರು ಇನ್ನೂ ಹೆಚ್ಚಿನ ಶ್ರಮ ಹಾಕಬೇಕು. ಕಲೆ, ತಂತ್ರಜ್ಞಾನ, ನಾಯಕತ್ವ ಸಂಬಂಧಿತ ಕ್ಷೇತ್ರಗಳಲ್ಲಿ ಇರುವವರಿಗೆ ಆದಾಯ ಹೆಚ್ಚಾಗಲಿದೆ. ಪ್ರೀತಿಪಾತ್ರರ ಜತೆ ಬಂಧ ಗಟ್ಟಿಯಾಗಲಿದೆ. ಶುಭದಿನ 12. ಗಣಪತಿಗೆ ದೂರ್ವಾರ್ಚನೆ ಮಾಡಿರಿ.





ವಾರದ ಆರಂಭದಲ್ಲಿ ಭೂಮಿ ವಿಚಾರಕ್ಕೆ ಸಂಬಂಧಿಸಿದಂತೆ ಲಾಭ ಆಗಲಿದೆ. ನಿಮ್ಮ ಉದ್ಯೋಗ ಹಾಗೂ ಸಿಗಲಿರುವ ಬಡ್ತಿಯಿಂದ ಪೋಷಕರು ಸಂತುಷ್ಟರಾಗುತ್ತಾರೆ. ಕುಟುಂಬವು ಈ ವಾರ ನಿಮ್ಮ ಪಾಲಿಗೆ ಆದ್ಯತೆ ಆಗಲಿದೆ. ಮನೆಯಲ್ಲಿ ಸಕಾರಾತ್ಮಕ ವಾತಾವರಣ ಇರಲಿದೆ. ನಿಮ್ಮ ಕಚೇರಿಯಲ್ಲಿ ಈವರೆಗೆ ತಿಳಿಯದೆ ಇದ್ದ ರಹಸ್ಯ ಸಂಗತಿಯೊಂದು ಗೊತ್ತಾಗಲಿದೆ. ಶುಭದಿನ 14. ಕಾಲಭೈರವನ ಸೇವೆ ಮಾಡಿರಿ.




ವಾರದ ಶುರುವಿನಲ್ಲಿ ಬರಹವನ್ನೇ ವೃತ್ತಿಯಾಗಿ ಮಾಡಿಕೊಂಡವರಿಗೆ ಅತ್ಯುತ್ತಮವಾಗಿದೆ. ವೃತ್ತಿಯಲ್ಲಿ ಏಳ್ಗೆ, ಪ್ರಗತಿ ಕಾಣಲಿದ್ದೀರಿ. ಮಾಹಿತಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಕೆ ಮಾಡಿಕೊಳ್ಳಲಿದ್ದೀರಿ. ಕುಟುಂಬ ಸದಸ್ಯರ ಜತೆಗೆ ಉತ್ತಮ ಬಾಂಧವ್ಯ ಏರ್ಪಡಲಿದೆ. ಆಹಾರ ನೀರಿನ ಸೇವನೆಯಲ್ಲಿ ಎಚ್ಚರಿಕೆಯಿಂದ ಇರಬೇಕು. ಈ ಸಮಯದಲ್ಲಿ ಉನ್ನತ ಸ್ಥಾನಮಾನ ಸಿಗಲಿದೆ. ಶುಭದಿನ 15. ವಿಷ್ಣು ಸಹಸ್ರನಾಮ ಪಠಿಸಿರಿ.





ಭೂಮಿ ಆಸ್ತಿ ವಿಚಾರದಲ್ಲಿ ಲಾಭ ಪಡೆಯುವ ಯೋಗವಿದೆ. ಕಾನೂನು ಕಟ್ಲೆಗಳಲ್ಲಿ ನಿಮ್ಮ ಪರವಾದ ಪ್ರಗತಿ ಇದೆ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ನಿರ್ಧಾರಿತ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ. ಹೆಸರಾಂತ ಕಂಪನಿಯೊಂದರ ಜತೆಗೆ ವ್ಯಾವಹಾರಿಕ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಆರೋಗ್ಯ ಕ್ಷೀಣಿಸುತ್ತದೆ. ಶುಭದಿನ 12. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.




ವಾರದ ಆರಂಭದಲ್ಲೇ ಶುಭ ಸುದ್ದಿ ಕೇಳಲಿದ್ದೀರಿ. ಈ ಹಿಂದಿನ ದೈಹಿಕ ಸಮಸ್ಯೆಗಳು ನಿವಾರಣೆಯಾಗಲಿವೆ. ಸಕಾರಾತ್ಮಕ ಆಲೋಚನೆ ವೃದ್ಧಿಯಾಗಲಿದೆ. ದೈನಂದಿನ ವ್ಯವಹಾರಗಳಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದೆ ಮುಂದುವರಿಯಿರಿ. ಇನ್ನು ಹಣಕಾಸಿನ ಅನುಕೂಲ ಆಗಲಿದೆ. ವೈವಾಹಿಕವಾಗಿ ಬಹಳ ಸಂತೋಷವಾಗಿ ಇರುವಂಥ ಸಮಯ ಇದು. ಶುಭದಿನ 11. ಸುಬ್ರಹ್ಮಣ್ಯ ಜಪ ಗೋಪೂಜೆ ಮಾಡಿರಿ.




ಹಣಕಾಸು ಹೂಡಿಕೆ ಮಾಡಿದ್ದನ್ನು ಈಗ ಬಳಸಿಕೊಳ್ಳಲು ಮುಂದಾಗಲಿದ್ದೀರಿ. ಕೋರ್ಟ್ ವ್ಯವಹಾರಗಳು ನಿಮ್ಮ ಪರವಾಗಿ ಆಗುವ ಸಾಧ್ಯತೆ ಇದೆ. ಜೀವನದಲ್ಲಿ ಉನ್ನತ ಸ್ಥಾನವನ್ನು ತಲುಪಲು ಮುಖ್ಯವಾದ ತೀರ್ಮಾನ ಕೈಗೊಳ್ಳಲಿದ್ದೀರಿ. ಆದರೆ ಭವಿಷ್ಯದ ನಿಮ್ಮ ಗುರಿಯನ್ನು ನಿರ್ಧರಿಸುವ ಕಡೆಗೆ ಗಮನ ಕೇಂದ್ರೀಕರಿಸುತ್ತೀರಿ. ಶುಭದಿನ 12. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಆರ್ಥಿಕ ಪ್ರಗತಿ ಸಾಧಿಸಲು ಉತ್ತಮ ಅವಕಾಶಗಳಿವೆ. ಸರಿಯಾದ ದಿಕ್ಕಿನಲ್ಲಿ ಪ್ರಯತ್ನ ಪಡಲು ಸೂಕ್ತ ಸಮಯ ಇದು. ಹಣದ ಗಳಿಕೆ ಆಗಲಿದೆ. ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆ ಮಾಡಬಹುದು. ಜತೆಗೆ ಪ್ರಾಮಾಣಿಕ ಪರಿಶ್ರಮವೂ ಹಾಕಿದರೆ ಯಶಸ್ಸು ದೊರೆಯುವ ಅವಕಾಶ ಹೆಚ್ಚಾಗಿದೆ. ಶುಭದಿನ 12. ಕನಕಧಾರಾ ಸ್ತೋತ್ರ ಪಠಿಸಿರಿ.




ಪರಿಶ್ರಮಕ್ಕೆ ತಕ್ಕಂತೆ ಫಲಿತಾಂಶ ನಿಮಗೆ ದೊರೆಯಲಿದೆ. ಉದ್ಯೋಗ ಸಂದರ್ಶನದಲ್ಲಿ ಈ ಸಮಯದಲ್ಲಿ ನಿಮ್ಮ ಪಾಲಿಗೆ ಯಶಸ್ಸು ಸಿಗಲಿದೆ. ನೀವು ಈಗಾಗಲೇ ಮಾಡಿದ ಒಳ್ಳೆ ಕೆಲಸಕ್ಕೆ ಮೆಚ್ಚುಗೆ, ಮನ್ನಣೆ, ಪುರಸ್ಕಾರಗಳು ಲಭಿಸಲಿವೆ. ಕೌಟುಂಬಿಕ ಜೀವನ ಆರಾಮವಾಗಿ ಇರುತ್ತದೆ. ಲೌಕಿಕ ವ್ಯವಹಾರಗಳಲ್ಲಿ ಸಂತೃಪ್ತಿಯನ್ನು ಅನುಭವಿಸಲಿದ್ದೀರಿ. ಶುಭದಿನ 11. ಚಂಡಿ ಪಾರಾಯಣ ಮಾಡಿರಿ.